Akashvani : Bengaluru
National Bulletin In Kannada
25.08.2025 : 1310hrs

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

25.08.2025 : 1310hrs

*******

**ಮುಖ್ಯಾಂಶಗಳು:**

1. ಪ್ರಧಾನಿ ನರೇಂದ್ರ ಮೋದಿ-ಫಿಜಿ ಪ್ರಧಾನಿ ಸಿತಿವೇನಿ ರಬುಕ ನಡುವೆ ನಿಯೋಗ ಮಟ್ಟದ ಮಾತುಕತೆ ; ದ್ವಿಪಕ್ಷೀಯ ಸಹಕಾರ ಬಲವರ್ಧನೆಗೆ ಒತ್ತು
2. ಜೈಲಿನಿಂದ ಸರ್ಕಾರ ನಡೆಸುವುದು ಅಸಾಧ್ಯ ; ಸಂವಿಧಾನದ ೧೩೦ನೇ ತಿದ್ದುಪಡಿ ಮಸೂದೆ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸ್ಪಷ್ಟನೆ
3. ಉತ್ತರಪ್ರದೇಶದಲ್ಲಿ ರಸ್ತೆ ಅಪಘಾತ ; ಕನಿಷ್ಠ ೯ ಮಂದಿ ಸಾವು, ೪೫ ಜನರಿಗೆ ಗಾಯ
4. ಪ್ಯಾರಿಸ್‌ನಲ್ಲಿ ಇಂದಿನಿಂದ ಬಿಡಬ್ಲ್ಯೂಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ ಆರಂಭ ; ಭಾರತದ ಪ್ರಮುಖ ಆಟಗಾರರು ಕಣದಲ್ಲಿ

*********

ಪ್ರಧಾನಿ ನರೇಂದ್ರ ಮೋದಿ ಅವರಿಂದು ನವದೆಹಲಿಯಲ್ಲಿ ಫಿಜಿ ಪ್ರಧಾನಮಂತ್ರಿ ಸಿಟಿವೆನಿ ರಬೂಕಾ ಅವರೊಂದಿಗೆ ನಿಯೋಗ ಮಟ್ಟದ ಮಾತುಕತೆ ನಡೆಸಿದರು. ಫಿಜಿ ಪ್ರಧಾನಿ ರಬೂಕಾ ಅವರು, ಮೂರು ದಿನಗಳ ಅಧಿಕೃತ ಭಾರತ ಪ್ರವಾಸಕ್ಕಾಗಿ ನಿನ್ನೆ ನವದೆಹಲಿಗೆ ಆಗಮಿಸಿದರು. ಫಿಜಿ ಪ್ರಧಾನಿ ರಬೂಕಾ ಅವರೊಂದಿಗೆ ಅವರ ಪತ್ನಿ ಸುಲುಎಟಿ ರಬೂಕಾ ಸಹ ಆಗಮಿಸಿದ್ದು, ನಿಯೋಗದಲ್ಲಿ ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳ ಸಚಿವ ರಾಟು ಅಟೋನಿಯೋ ಲಲಬಾಲಾವು ಹಾಗೂ ಹಿರಿಯ ಅಧಿಕಾರಿಗಳಿದ್ದಾರೆ. ನಿನ್ನೆ ಸಂಜೆ ಕೇಂದ್ರ ಸಚಿವ ಜೆ.ಪಿ ನಡ್ಡಾ, ಫಿಜಿ ಪ್ರಧಾನಿ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ, ಸಿಟಿವೆನಿ ರಬೂಕಾ ಅವರ ಮೊದಲ ಅಧಿಕೃತ ಭಾರತ ಭೇಟಿ ಇದಾಗಿದೆ. ಈ ವೇಳೆ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಸಹ ಭೇಟಿ ಮಾಡಲಿದ್ದಾರೆ. ಈ ಭೇಟಿ ಭಾರತ ಮತ್ತು ಫಿಜಿ ನಡುವಿನ ದೀರ್ಘಕಾಲದ ಸಂಬಂಧವನ್ನು ಮತ್ತಷ್ಟು ಬಲಪಡಿಸಲಿದೆ. ಉಭಯ ರಾಷ್ಟ್ರಗಳು

ಸಾಂಸ್ಕೃತಿಕ, ರಾಜತಾಂತ್ರಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರವನ್ನು ವಿಸ್ತರಿಸಲು ಬದ್ಧವಾಗಿರುವುದನ್ನು ಈ ಭೇಟಿಯು ಪುನರುಚ್ಚರಿಸುತ್ತದೆ.

*********

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ಗುಜರಾತ್‌ಗೆ ಎರಡು ದಿನಗಳ ಪ್ರವಾಸ ಕೈಗೊಳ್ಳಲಿದ್ದಾರೆ. ಇಂದು ಸಂಜೆ ಅವರು ಅಹಮದಾಬಾದ್‌ನ ಖೋದಲಧಾಮ ಮೈದಾನದಲ್ಲಿ ೫ ಸಾವಿರದ ೪೦೦ ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಈ ಸಂದರ್ಭದಲ್ಲಿ ಪ್ರಧಾನಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ಇಂದು ಉದ್ಘಾಟನೆಗೊಳ್ಳುತ್ತಿರುವ ಯೋಜನೆಗಳು ನಗರಾಭಿವೃದ್ಧಿ, ಇಂಧನ, ರಸ್ತೆ ಮತ್ತು ರೈಲ್ವೆ ಇಲಾಖೆಗೆ ಸಂಬಂಧಿಸಿದ ಯೋಜನೆಗಳಾಗಿವೆ. ಪ್ರವಾಸದ ಎರಡನೇ ದಿನವಾದ ನಾಳೆ, ಹಂಸಲ್ಪುರದಲ್ಲಿ ಪ್ರಧಾನಿ ಹೈಬ್ರಿಡ್ ಬ್ಯಾಟರಿ ಎಲೆಕ್ಟ್ರೋಡ್‌ಗಳ ಸ್ಥಳೀಯ ಉತ್ಪಾದನೆಗೆ ಚಾಲನೆ ನೀಡಲಿದ್ದು, ೧೦೦ ದೇಶಗಳಿಗೆ ಬ್ಯಾಟರಿ ಎಲೆಕ್ಟ್ರಿಕ್ ವಾಹನಗಳ ರಫ್ತಿಗೆ ಹಸಿರು ನಿಶಾನೆ ತೋರಿಸಲಿದ್ದಾರೆ.

******ಪ್ರಧಾನಿ ಪ್ರವಾಸದ ಕುರಿತು ಒಂದು ವರದಿ:******

*********

ಜಾಗತಿಕ ಮಟ್ಟದ ಮೂಲಸೌಕರ್ಯ ಮತ್ತು ಸಂಪರ್ಕ ಸಾಧಿಸುವ ಸರ್ಕಾರದ ದೃಷ್ಟಿಕೋನಕ್ಕೆ ಪೂರಕವಾಗಿ, ೧ ಸಾವಿರದ ೪೦೦ ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ಹಲವು ರೈಲ್ವೆ ಯೋಜನೆಗಳನ್ನು ಪ್ರಧಾನಿ ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ. ಇದರಲ್ಲಿ ೬೫ ಕಿಮೀ ಉದ್ದದ ಮಹೆಸಾನಾ-ಪಾಲನ್ಪುರ್ ರೈಲು ಮಾರ್ಗದ ದ್ವಿಗುಣೀಕರಣ, ಕಲೋಲ್-ಕಡಿ-ಕಟೋಸನ್ ರಸ್ತೆ ಮತ್ತು ಬೆಚರಾಜಿ-ರಣುಜ್ ರೈಲು ಮಾರ್ಗಗಳ ಗೇಜ್ ಉನ್ನತೀಕರಣ ಸೇರಿದೆ. ಇದು ಉತ್ತರ ಗುಜರಾತಿನಲ್ಲಿ ಸುರಕ್ಷಿತ ಮತ್ತು ಸುಗಮ ಸಂಚಾರಕ್ಕೆ ಸಹಕಾರಿಯಾಗಲಿದೆ. ಕಟೋಸನ್ ರಸ್ತೆ ಮತ್ತು ಸಾಬರಮತಿ ನಡುವೆ ಪ್ಯಾಸೆಂಜರ್ ರೈಲಿಗೆ ಹಸಿರು ನಿಶಾನೆ ತೋರಲಿರುವ ಪ್ರಧಾನಿ, ಬೆಚರಾಜಿಯಿಂದ ಸರಕು ರೈಲು ಸೇವೆಯನ್ನೂ ಪ್ರಾರಂಭಿಸಲಿದ್ದಾರೆ. ಇದರ ಜೊತೆಗೆ ವಿರಾಮಗಾಮ್-ಖುದಾದ್-ರಾಂಪುರ ರಸ್ತೆಯ ಅಗಲೀಕರಣ ಹಾಗೂ ಅಹಮದಾಬಾದ್-ಮಹೆಸಾನಾ-ಪಾಲನ್ಪುರ್ ಮಾರ್ಗದಲ್ಲಿ ಷಟ್ಪಥ ಕೆಳಸೇತುವೆಗಳ ಶಂಕುಸ್ಥಾಪನೆ ನೆರವೇರಿಸಲಿದ್ದು, ಅಹಮದಾಬಾದ್-ವಿರಾಮಗಾಮ್ ರಸ್ತೆಯಲ್ಲಿ ರೈಲು ಮೇಲ್ಸೇತುವೆಯ ನಿರ್ಮಾಣಕ್ಕೂ ಚಾಲನೆ

ನೀಡಲಿದ್ದಾರೆ. ಈ ಎಲ್ಲಾ ಉಪಕ್ರಮಗಳು ಪ್ರದೇಶದಲ್ಲಿ ಕೈಗಾರಿಕಾ ಬೆಳವಣಿಗೆಗೆ ವೇಗ ನೀಡಿ, ಸಾರಿಗೆ ಸಾಮರ್ಥ್ಯವನ್ನು ಹೆಚ್ಚಿಸಿ, ಹೊಸ ಆರ್ಥಿಕ ಅವಕಾಶಗಳನ್ನು ಸೃಜಿಸಲಿವೆ.

*********

ಸಂವಿಧಾನದ ೧೩೦ನೇ ತಿದ್ದುಪಡಿ ಮಸೂದೆಯ ವಿರುದ್ಧದ ಪ್ರತಿಭಟನೆಗಳಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರೋಧ ಪಕ್ಷಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಸುದ್ದಿ ಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಅವರು, ವಿರೋಧ ಪಕ್ಷದ ನಾಯಕರು ಜೈಲಿನಲ್ಲಿದ್ದಾಗಲೂ ಸರ್ಕಾರ ರಚಿಸಲು ಮತ್ತು ನಡೆಸಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಮಸೂದೆಯ ವಿರುದ್ಧ ವಿರೋಧ ಪಕ್ಷಗಳ ಪ್ರತಿಭಟನೆಯನ್ನು ಅವರು ಪ್ರಜಾಪ್ರಭುತ್ವ ವಿರೋಧಿ ಎಂದು ಕರೆದರು. ಈ ಮಸೂದೆಯ ಅಡಿಯಲ್ಲಿ ಪ್ರಧಾನಮಂತ್ರಿ ಕಚೇರಿಯನ್ನು ತರಬೇಕೆಂದು ಪ್ರಧಾನಿ ನರೇಂದ್ರ ಮೋದಿಯವರೇ ಒತ್ತಾಯಿಸಿದ್ದರು. ಭಾರತದ ಜನತಾ ಪ್ರಾತಿನಿಧ್ಯ ಕಾಯ್ದೆಯನ್ನು ಉಲ್ಲೇಖಿಸಿ, ಯಾವುದೇ ಚುನಾಯಿತ ಪ್ರತಿನಿಧಿಗೆ ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ಶಿಕ್ಷೆ ವಿಧಿಸಿದರೆ, ಅವರು ಸಂಸತ್ ಸದಸ್ಯ ಸ್ಥಾನದಿಂದ ಬಿಡುಗಡೆ ಹೊಂದುತ್ತಾರೆ ಎಂದು ಹೇಳಿದರು.

***ಧ್ವನಿ *** ಅಮಿತ್ ಶಾ

೧೩೦ನೇ ತಿದ್ದುಪಡಿ ಮಸೂದೆ ಕುರಿತ ಜಂಟಿ ಸಂಸದೀಯ ಸಮಿತಿಯನ್ನು ತಿರಸ್ಕರಿಸಿರುವ ವಿರೋಧ ಪಕ್ಷಗಳ ನಡೆಯ ಕುರಿತು ಮಾತನಾಡಿದ ಅವರು, ಜೆಪಿಸಿ ಅದರ ಕೆಲಸವನ್ನು ಮಾಡಲಿದೆ ಎಂದು ಸ್ಪಷ್ಟಪಡಿಸಿದರು.

ಮಾಜಿ ಉಪ ರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರ ರಾಜೀನಾಮೆ ಬಗ್ಗೆ ವಿರೋಧ ಪಕ್ಷಗಳು ಪ್ರಶ್ನೆಗಳನ್ನು ಎತ್ತುತ್ತಿರುವ ಬಗ್ಗೆ, ಅವರು, ಜಗದೀಪ್ ಧನ್‌ಕರ್ ಅವರು, ವೈಯಕ್ತಿಕ ಆರೋಗ್ಯ ಸಮಸ್ಯೆಯಿಂದಾಗಿ ರಾಜೀನಾಮೆ ನೀಡಿದ್ದಾರೆ. ಈ ವಿಷಯವನ್ನು ಹೆಚ್ಚು ಎಳೆಯಬೇಡಿ ಎಂದು ಅವರು ವಿರೋಧ ಪಕ್ಷಗಳನ್ನು ಕೇಳಿಕೊಂಡರು.

*********

ಉತ್ತರಪ್ರದೇಶದ ಬುಲನ್ ಶೆಹರ್ ರಾಷ್ಟ್ರೀಯ ಹೆದ್ದಾರಿ ೩೪ ರಲ್ಲಿ ನಿನ್ನ ತಡರಾತ್ರಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಇಬ್ಬರು ಮಹಿಳೆಯರು ಮತ್ತು ಓರ್ವ ಮಗು ಸೇರಿದಂತೆ ಕನಿಷ್ಠ ೬ ಮಂದಿ ಸಾವನ್ನಪ್ಪಿರುವ ಘಟನೆ ವರದಿಯಾಗಿದೆ. ಅಪಘಾತದಲ್ಲಿ ೪೫ ಜನ ಗಾಯಗೊಂಡಿದ್ದಾರೆ.

ಘಾತಲ್ ಹಳ್ಳಿಯಲ್ಲಿ ಕಂಟೈನರ್ ಟ್ರಕ್‌ವೊಂದು ಭಕ್ತಾದಿಗಳು ತುಂಬಿದ್ದ ಟ್ರ್ಯಾಕ್ಟರ್‌ವೊಂದಕ್ಕೆ ಡಿಕ್ಕಿ ಹೊಡೆದ ಪರಿಣಾಮ ದುರ್ಘಟನೆ ಸಂಭವಿಸಿದೆ. ಭಕ್ತಾದಿಗಳು ರಾಜಸ್ಥಾನದ ಗೊಗಮೇಡಿಯಿಂದ ಉತ್ತರಪ್ರದೇಶದ ಕಸ್‌ಗಂಜ್‌ಗೆ ಪ್ರಯಾಣಿಸುತ್ತಿದ್ದರು. ಗಾಯಗೊಂಡವರನ್ನು ಖುರ್ಜಾ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಅಪಘಾತಕ್ಕೆ ಕಾರಣವಾಗಿದ್ದ ಟ್ರಕ್‌ಅನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

*********

ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಇಂದು ಅವರ ತವರೂರಾದ ಲಖನೌಗೆ ಆಗಮಿಸಿದ್ದು, ಅವರನ್ನು ಉತ್ತರಪ್ರದೇಶ ಉಪಮುಖ್ಯಮಂತ್ರಿ ಬಿಜೇಶ್ ಪಾಠಕ್ ಬರ ಮಾಡಿಕೊಂಡರು. ಅವರ ಆಗಮನದ ಹಿನ್ನೆಲೆ ನಗರದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರ ಶಾಲೆಯು ವಿಮಾನ ನಿಲ್ದಾಣದಿಂದ ನಗರದ ಗೋಮತಿ ನಗರ ಪ್ರದೇಶದವರೆಗೆ ಆಯೋಜಿಸಿದ್ದ ವಿಜಯೋತ್ಸವ ಮೆರವಣಿಗೆಯಲ್ಲಿ ಮತ್ತು ನಂತರ ನಡೆದ ಸನ್ಮಾನ ಸಮಾರಂಭದಲ್ಲಿ ಶುಭಾಂಶು ಶುಕ್ಲಾ ಪಾಲ್ಗೊಂಡರು. ಈ ವೇಳೆ ಸಾವಿರಾರು ವಿದ್ಯಾರ್ಥಿಗಳು ಅವರನ್ನು ಗೌರವಿಸಲು ಮೆರವಣಿಗೆಯಲ್ಲಿ ಭಾಗವಹಿಸಿದರು. ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಉಪಮುಖ್ಯಮಂತ್ರಿ ಬ್ರಜೇಶ್ ಪಾಠಕ್, ಶುಭಾಂಶು ಶುಕ್ಲಾ ನಗರಕ್ಕೆ ಹಾಗೂ ಇಡೀ ರಾಷ್ಟ್ರಕ್ಕೆ ಗೌರವ ತಂದುಕೊಟ್ಟಿದ್ದಾರೆ. ಅವರ ಆಗಮನದಿಂದ ಇಡೀ ನಗರ ಹೆಮ್ಮೆ ಪಡುತ್ತಿದೆ. ಉತ್ತರಪ್ರದೇಶ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಸಹ ಭವ್ಯ ಸಮಾರಂಭವನ್ನು ಇಂದು ಸಂಜೆ ಆಯೋಜಿಸಿದ್ದು, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರನ್ನು ಸನ್ಮಾನಿಸಲಿದ್ದಾರೆ.

*********

ಪೂರ್ವ ಭಾರತದಾದ್ಯಂತ ನಾಗರಿಕ ವಿಮಾನಯಾನ ವಲಯವನ್ನು ಬಲಪಡಿಸಲು ಇರುವ ಅವಕಾಶಗಳು ಮತ್ತು ಎದುರಾಗಬಹುದಾಂತಹ ಸಮಸ್ಯೆಗಳ ಕುರಿತು ಚರ್ಚಿಸಲು ಒಡಿಶಾದಲ್ಲಿಂದು ಆಯೋಜಿಸಲಾಗಿರುವ ಪೂರ್ವ ಪ್ರದೇಶದ ನಾಗರಿಕ ವಿಮಾನಯಾನ ಸಚಿವರ ಸಮ್ಮೇಳನವನ್ನು ಕೇಂದ್ರ ನಾಗರಿಕ ವಿಮಾನಯಾನ ಸಚಿವ ರಾಮ್‌ಮೋಹನ್ ನಾಯ್ಡು ಉದ್ಘಾಟಿಸಿದರು. ಭುವನೇಶ್ವರದಲ್ಲಿ ನಡೆಯುತ್ತಿರುವ ಕಾರ್ಯಕ್ರಮದಲ್ಲಿ ಛತ್ತೀಸ್‌ಗಢ, ಬಿಹಾರ, ಜಾರ್ಖಂಡ್, ಪಶ್ಚಿಮ ಬಂಗಾಳ, ಒಡಿಶಾ ಹಾಗೂ ಅಂಡಮಾನ್ ನಿಕೋಬಾರ್ ಸೇರಿದಂತೆ ಒಟ್ಟು ೬ ರಾಜ್ಯಗಳು ಹಾಗೂ ಒಂದು ಕೇಂದ್ರಾಡಳಿತ ಪ್ರದೇಶದ ಪ್ರಮುಖ ಪಾಲುದಾರರನ್ನೊಳಗೊಂಡ ನಿಯೋಗಗಳು ಭಾಗವಹಿಸಿವೆ. ಸಮ್ಮೇಳನದಲ್ಲಿ ವಿಮಾನ ನಿಲ್ದಾಣ ಹೆಲಿಪೋರ್ಟ್ ಅಭಿವೃದ್ಧಿ, ಉಡಾನ್ ಯೋಜನೆ,

ವಿಮಾನಯಾನ ಕೌಶಲ್ಯಾಭಿವೃದ್ಧಿ, ಡ್ರೋನ್ ಪರಿಸರ ವ್ಯವಸ್ಥೆ ವಿಸ್ತರಣೆ, ಹೆಲಿಕಾಪ್ಟರ್ ತುರ್ತು ವೈದ್ಯಕೀಯ ಸೇವೆ ಸೇರಿದಂತೆ ಮತ್ತಿತರ ವಿಷಯಗಳ ಕುರಿತು ಉನ್ನತಮಟ್ಟದ ಸಮಾಲೋಚನೆ ನಡೆಯುತ್ತಿದೆ.ಉದ್ಘಾಟನಾ ಕಾರ್ಯಕ್ರಮದಲ್ಲಿ ಸಚಿವ ರಾಮ್‌ಮೋಹನ್ ನಾಯ್ಡು, ವಿಮಾನಯಾನ ಮೂಲಸೌಕರ್ಯವನ್ನು ಆಧುನೀಕರಿಸುವ ಕುರಿತು ಕೈಗೊಂಡಿರುವ ಹಾಗೂ ಯೋಜಿಸಿರುವ ಯೋಜನೆಗಳ ಕುರಿತು ಸಂಕ್ಷಿಪ್ತ ವಿವರ ನೀಡಿದರು.

*********

ಭಾರತದ ಬ್ಯಾಡ್ಮಿಂಟನ್ ತಾರೆಗಳಾದ ಲಕ್ಷ್ಯಸೇನ್ ಮತ್ತು ಪಿ.ವಿ. ಸಿಂಧು ಇಂದು ಪ್ಯಾರಿಸ್‌ನಲ್ಲಿ ಪ್ರಾರಂಭವಾಗಲಿರುವ ಬಿಡಬ್ಲ್ಯೂಎಫ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಕಠಿಣ ಆರಂಭಿಕ ಪಂದ್ಯಗಳನ್ನು ಎದುರಿಸಲು ಸಜ್ಜಾಗಿದ್ದಾರೆ. ೨೧ನೇ ಶ್ರೇಯಾಂಕದಲ್ಲಿರುವ ಲಕ್ಷ್ಯ, ಅಗ್ರ ಶ್ರೇಯಾಂಕಿತ ಶಿ ಯು ಕಿ ಅವರನ್ನು ಎದುರಿಸಲಿದ್ದಾರೆ, ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಮತ್ತು ೨೦೧೯ ರ ವಿಶ್ವ ಚಾಂಪಿಯನ್ ಸಿಂಧು, ೧೫ನೇ ಶ್ರೇಯಾಂಕಿತ ಬಲ್ಗೇರಿಯಾದ ಕಲೋಯಾನಾ ನಲ್ಬಂಟೋವಾ ಅವರನ್ನು ಎದುರಿಸಲಿದ್ದಾರೆ. ಕಳೆದ ವರ್ಷ ಕಂಚು ಗೆದ್ದಿದ್ದ ಎಚ್‌ಎಸ್ ಪ್ರಣಯ್, ಫಿನ್‌ಲ್ಯಾಂಡ್‌ನ ಜೋಕಿಮ್ ಓಲ್ದಾರ್ಫ್ ವಿರುದ್ಧ ಆಡಲಿದ್ದಾರೆ, ಪುರುಷರ ಡಬಲ್ಸ್‌ನಲ್ಲಿ, ಒಂಬತ್ತನೇ ಶ್ರೇಯಾಂಕಿತ ಸಾತ್ವಿಕ್‌ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಮೊದಲ ಸುತ್ತಿನಿಂದ ೨ನೇ ಸುತ್ತಿಗೆ ನೇರ ಪ್ರವೇಶ ಪಡೆದಿದ್ದಾರೆ. ಮಿಶ್ರ ಡಬಲ್ಸ್‌ನಲ್ಲಿ ಧ್ರುವ್ ಕಪಿಲಾ ಮತ್ತು ತನಿಶಾ ಕ್ರಾಸ್ಟೊ ಕೂಡ ಬೈ ಪಡೆದರೆ, ರೋಹನ್ ಕಪೂರ್ ಮತ್ತು ಋತ್ವಿಕಾ ಶಿವಾನಿ ಗಡ್ಡೆ, ಮಕಾವ್‌ನ ಲಿಯೋಂಗ್ ಲೋಕ್ ಚೋಂಗ್ ಮತ್ತು ವೆಂಗ್ ಚಿ ಎನ್‌ಜಿ ಅವರನ್ನು ಎದುರಿಸಲಿದ್ದಾರೆ. ಮಹಿಳಾ ಡಬಲ್ಸ್‌ನಲ್ಲಿ ಪ್ರಿಯಾ ಕೊಂಜೆಂಗ್‌ಬಮ್-ಶ್ರುತಿ ಮಿಶ್ರಾ ಮತ್ತು ಪಾಂಡಾ ಸಹೋದರಿಯರಾದ ರುತುಪರ್ಣ ಮತ್ತು ಶ್ವೇತಪರ್ಣ ಭಾರತದ ಪರ ಕಣಕ್ಕಿಳಿಯಲಿದ್ದಾರೆ.

****END*****